ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 3, November-December, 2023, Pp. 83-87.
©*IIMRD*, Mysuru

IIMRD JOURNALS
www.iimrd.com

# ಇಳಕಲ್ ತಾಲೂಕಿನ ಗ್ರಾನೈಟ್ ಗಣಿಗಾರಿಕೆಯಿಂದ ಕೃಷಿ ಚಟುವಟಿಕೆ ಮೇಲಾಗಿರುವ ಪರಿಣಾಮಗಳು

**ಶರಣಬಸವ ಎಸ್ ಚೌಕಿಮಠ**
ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**ಸಾರಾಂಶ: (Abstract)**

*ಭಾರತದ ದೇಶದಲ್ಲಿ ಶೇ.70ರಷ್ಟು ಜನ ಹಳ್ಳಿಗಾಡಿನವರಾಗಿರುವುದರಿಂದ ಅವರು ಕೃಷಿಯ ಮೇಲೆ ಅವಲಂಬನೆಯಾಗಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಮ್ಮ ದೇಶದ ರೈತರ ಸಂಖ್ಯೆಗಿಂತ ಕಾಲುಭಾಗ ಮಾತ್ರವಿದ್ದರೂ, ತಮ್ಮ ದೇಶಕ್ಕೆ ಸಾಕಾಗಿ ಬೇರೆ ದೇಶಗಳಿಗೆ ರಫ್ತು ಮಾಡುವಷ್ಟು ಇಳುವರಿಯನ್ನು ತೆಗೆಯುತ್ತಾರೆ. ಇದಕ್ಕೆ ಪ್ರಮುಖ ಕಾರಣ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ. ಆದರೆ ನಮ್ಮ ದೇಶದ ರೈತರಿಗೆ ಆಧುನಿಕ ತಂತ್ರಜ್ಞಾನ ತಿಳಿದಿಲ್ಲದಿರುವುದರಿಂದ ಕೃಷಿಯು ಹಿಂದುಳಿಯುವುದಕ್ಕೆ ಕಾರಣವಾಗಿದೆ. ಹಳೆಯ ಕಾಲದ ಮಾದರಿಯ ವ್ಯವಸ್ಥೆಯನ್ನು ನೆಚ್ಚಿಕೊಂಡು ವ್ಯವಸಾಯವನ್ನು ಮಾಡುವಂತಾಗಿದೆ. ನಮ್ಮ ದೇಶದ ಬಹುಪಾಲು ಕೃಷಿಯು ಮಳೆಯನ್ನವಲಂಬಿಸಿದೆ. ಸರಿಯಾದ ನೀರಾವರಿ ವ್ಯವಸ್ಥೆ ಇಲ್ಲವಾಗಿದೆ. ಪ್ರಸ್ತುತ ಲೇಖನದಲ್ಲಿ ಗ್ರಾನೈಟ್ ಗಣಿಗಾರಿಕೆಯಿಂದ ಕೃಷಿ ಚಟುವಟಿಕೆ ಮೇಲಾಗಿರುವ ಪರಿಣಾಮಗಳನ್ನು ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ಗ್ರಾನೈಟ್ ಗಣಿಗಾರಿಕೆ, ಇಳಕಲ್, ಕೃಷಿ ಚಟುವಟಿಕೆ, ಜೀವನೋಪಾಯ.

## ಪೀಠಿಕೆ

ನಮ್ಮ ದೇಶದ ರೈತರು ಬರಗಾಲ, ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತ ಮುಂತಾದುವುಗಳನ್ನು ಎದುರಿಸುವುದರ ಜೊತೆಗೆ ಮಾನವ ನಿರ್ಮಿತ ಪ್ರಕೋಪವಾದ ಗಣಿಗಾರಿಕೆಯು ಸುತ್ತಮುತ್ತಲಿನ ಕೃಷಿ ಚಟುವಟಿಕೆಗಳ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ. ಕೃಷಿಯು ಬಾಗಲಕೋಟೆ ಜಿಲ್ಲೆಯ ಅತಿದೊಡ್ಡ ಉದ್ಯೋಗ ಕ್ಷೇತ್ರವಾಗಿದೆ. ಶೇ.65 ಕ್ಕಿಂತ ಹೆಚ್ಚು ಜನರು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಬಾಗಲಕೋಟೆಯಲ್ಲಿ ಸರಿಸುಮಾರು 80% ಮಹಿಳಾ ಕಾರ್ಮಿಕರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ಉತ್ತರ ಕರ್ನಾಟಕದ ಬಹುತೇಕ ಭಾಗಗಳಂತೆ ಬಾಗಲಕೋಟೆಯು ಕಪ್ಪು ಮಣ್ಣಿನಿಂದ ಸಮೃದ್ಧವಾಗಿದೆ. ಇದು ಹತ್ತಿ ಕೃಷಿಗೆ ಅನುಕೂಲಕರವಾಗಿದೆ. ಬಾಗಲಕೋಟೆಯ ಆರ್ಥಿಕತೆಯು ಕರ್ನಾಟಕದ 12ನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಜಿಲ್ಲೆಯಲ್ಲಿ ಮುಖ್ಯವಾಗಿ ರಬಿ ಮತ್ತು ಜೋಳ, ಕಡಲೆ, ಹತ್ತಿ, ಬಾಜ್ರಾ, ಗೋಧಿ, ಕಬ್ಬು ಮತ್ತು ತಂಬಾಕು ಬೆಳೆಗಳನ್ನು

*Please cite this article as:* ಶರಣಬಸವ ಎಸ್ ಚೌಕಿಮಠ. (2023). ಇಳಕಲ್ ತಾಲೂಕಿನ ಗ್ರಾನೈಟ್ ಗಣಿಗಾರಿಕೆಯಿಂದ ಕೃಷಿ ಚಟುವಟಿಕೆ ಮೇಲಾಗಿರುವ ಪರಿಣಾಮಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(3). ಪು.ಸಂ.* 83–87.

ಬೆಳೆಯುತ್ತಾರೆ. ಇದಲ್ಲದೆ ತುವರ್ ದಾಲ್, ಗ್ರಾಮ್, ಕುಲ್ತಿ ಮತ್ತು ಮುಂಗ್ ದಾಲ್, ಕ್ಯಾಸ್ಟರ್ ಆಯಿಲ್, ಲಿನ್ಸೆಡ್ ಮತ್ತು ಎಳ್ಳು ಮತ್ತು ಇತರೆ ಬೆಳೆಗಳನ್ನು ಸಹ ಬೆಳೆಯುತ್ತಾರೆ.

ಬಾಗಲಕೋಟೆಯಲ್ಲಿ ಸಮರ್ಪಕ ಮಳೆ ಕೊರತೆಯಿಂದಾಗಿ ಬರಗಾಲ ಸಾಮಾನ್ಯವಾಗಿದೆ. 1901 ರಲ್ಲಿ ಈ ಪ್ರದೇಶದಲ್ಲಿ ಸಂಭವಿಸಿದ ಕ್ಷಾಮವು ಬಾಗಲಕೋಟೆಯ ಕೃಷಿ ಉದ್ಯಮಕ್ಕೆ ಸಾಕಷ್ಟು ಆರ್ಥಿಕ ನಷ್ಟವನ್ನು ಉಂಟುಮಾಡಿತು. ಜಿಲ್ಲೆಯು ಕರ್ನಾಟಕದಲ್ಲಿ ಐದನೇ ಅತಿ ಹೆಚ್ಚು ರೈತರ ಆತ್ಮಹತ್ಯೆ ಪ್ರಮಾಣವನ್ನು ಹೊಂದಿದೆ. ಸಮರ್ಥ ನೀರು ನಿರ್ವಹಣಾ ತಂತ್ರಗಳು ಮತ್ತು ಸರ್ಕಾರದ ಪರಿಹಾರಗಳು ಬರಪೀಡಿತ ಜಿಲ್ಲೆಯ ಪರಿಣಾಮಗಳನ್ನು ಸ್ವಲ್ಪಮಟ್ಟಿಗೆ ತಗ್ಗಿಸಿವೆ.

## ಗ್ರಾನೈಟ್ ಗಣಿಗಾರಿಕೆಯಿಂದ ಕೃಷಿ ಚಟುವಟಿಕೆ ಮೇಲಾಗಿರುವ ಅಪೇಕ್ಷಿತ ಪರಿಣಾಮಗಳು

### ನಿರುದ್ಯೋಗ ನಿವಾರಣೆ

ಗಣಿಗಾರಿಕೆಯಿಂದಾಗಿ ನಿರುದ್ಯೋಗ ನಿವಾರಣೆಯಾಗುತ್ತಿದೆ. ಕೃಷಿಯನ್ನು ವರ್ಷಪೂರ್ತಿ ಮಾಡಲು ಆಗುವುದಿಲ್ಲ. ಕೆಲವೊಂದು ತಿಂಗಳು ಕೃಷಿಯಲ್ಲಿ ಕೆಲಸವಿಲ್ಲದಂತಾಗುತ್ತದೆ. ಅಂತಹ ಸಂದರ್ಭದಲ್ಲಿ ರೈತ ಗಣಿಗಾರಿಕೆಯ ಕೆಲಸವನ್ನು ನಿರ್ವಹಿಸುವುದು ಕಂಡುಬರುತ್ತದೆ. ಸಣ್ಣ ಪ್ರಮಾಣದ ಭೂಮಿಯನ್ನು ಹೊಂದಿದ ದೊಡ್ಡ ಕುಟುಂಬವು ಗಣಿಗಾರಿಕೆಯಿಂದ ಜೀವನ ನಿರ್ವಹಿಸಬಹುದಾಗಿದೆ. ಇಂತಹ ಕುಟುಂಬದಲ್ಲಿ ಕೆಲವರು ಕೃಷಿಯನ್ನವಲಂಬಿಸಿದರೆ ಕೆಲವರು ಗಣಿಗಾರಿಕೆಯಲ್ಲಿ ದುಡಿಯಬಹುದಾಗಿದೆ.

### ಆರ್ಥಿಕ ಸ್ಥಿತಿ ಸುಧಾರಣೆ

ಗಣಿಗಾರಿಕೆಯ ಕೆಲಸದಲ್ಲಿ ಉತ್ತಮವಾದ ಕೂಲಿ ದೊರೆಯುತ್ತದೆ. ಕೃಷಿ ಚಟುವಟಿಕೆಗೆ ಅಗತ್ಯವಾದ ಸಾಮಗ್ರಿಗಳನ್ನು ತರಬಹುದು. ರೈತರು ಹೊರಗಿನಿಂದ ಸಾಲ ತಂದು ಕೃಷಿಯನ್ನವಲಂಬಿಸಿ ಬದುಕುವುದು ಸ್ವಲ್ಪ ಕಡಿಮೆಯಾಗುತ್ತದೆ. ಗಣಿಗಾರಿಕೆಯ ಕೂಲಿಯಿಂದ ಮನೆಯ ಅಥವಾ ಕೃಷಿಯ ಮೇಲೆ ವೆಚ್ಚ ಮಾಡಲು ಅನುಕೂಲವಾಗುತ್ತದೆ. ಕೃಷಿಯಿಂದ ಆರು ತಿಂಗಳಿಗೆ ಅಥವಾ ವರ್ಷಕ್ಕೆ ಬೆಳೆಯನ್ನು ಬೆಳೆದಾಗ ಮಾತ್ರ ಅವರಿಗೆ ಲಾಭ ದೊರೆತರೆ, ಅವರ ಕೈಯಲ್ಲಿ ಹಣ ಉಳಿಯುತ್ತದೆ. ಅಷ್ಟೊಂದು ಸಮಯದವರೆಗೆ ಕಾಯುವ ಅವಕಾಶ ಕಡಿಮೆಯಾಗಿರುತ್ತದೆ. ಕೇವಲ ಕೃಷಿಯನ್ನು ನೆಚ್ಚಿಕೊಂಡು ಗಣಿಗಾರಿಕೆಯ ಕೆಲಸದಲ್ಲಿ ತೊಡಗದೇ ಇರುವ ರೈತರಿಗೆ ಮಾತ್ರ ಕಷ್ಟವಾಗುತ್ತದೆ. ಆದರೆ ಕೃಷಿಯ ಜೊತೆಗೆ ಗಣಿಗಾರಿಕೆಯ ಕಾರ್ಮಿಕರಾಗಿ ದುಡಿಯುವವರಿಗೆ ಉತ್ತಮವಾಗಿದೆ.

### ಉತ್ತಮವಾದ ವಾರ್ಷಿಕ ವರಮಾನದ ಆಶಯ

ಗಣಿಗಾರಿಕೆ ನಡೆಯುತ್ತಿರುವುದರಿಂದ ಕೆಲವೊಬ್ಬ ರೈತರ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಅದರಲ್ಲಿ ಕೆಲವರು ತಮ್ಮ ಜಮೀನಿನಲ್ಲಿ ದೊರೆಯುವ ಗ್ರಾನೈಟ್ ಕಲ್ಲನ್ನು ಆರಿಸಿಕೊಂಡು ಹಣ ಗಳಿಸಬಹುದಾಗಿದೆ. ಕೆಲವೊಂದು ರೈತರ ಹೊಲದಲ್ಲಿ ಕಬ್ಬಿಣದ ಗ್ರಾನೈಟನ ಕಲ್ಲುಗಳು ದೊರೆಯುವುದರಿಂದ ಸ್ವಂತವಾದ ಗಣಿಗಾರಿಕೆಯನ್ನು ನಡೆಸಬಹುದಾಗಿದೆ. ಕೆಲವೊಂದು ರೈತರು ತಮ್ಮ ಜಮೀನುಗಳಲ್ಲಿ ಕಲ್ಲುಗಳನ್ನು

ಆರಿಸುವುದು ಮತ್ತು ಬೇರೆಯವರು ಆರಿಸಿಕೊಳ್ಳುವುದಕ್ಕೆ ಹಣವನ್ನು ಪಡೆಯುತ್ತಿದ್ದಾರೆ. ಹೀಗಾಗಿ ಕೆಲ ರೈತರು ಗಣಿಗಾರಿಕೆಯಿಂದ ಆರ್ಥಿಕವಾಗಿ ಪ್ರಬಲರಾಗುತ್ತಿದ್ದಾರೆ.

**ನಷ್ಟದ ಭಯವಿಲ್ಲ**

ಕೆಲವೊಂದು ರೈತರು ಕೃಷಿಯಲ್ಲಿ ಲಾಭವಿಲ್ಲವೆಂದು ಗಣಿಗಾರಿಕೆಯ ಮಾಲೀಕರಿಗೆ ಗ್ರಾನೈಟ್ ಕಣಜಕ್ಕಾಗಿ ಭೂಮಿಯನ್ನು ವಾರ್ಷಿಕ 25–35 ಸಾವಿರ ರೂ ಬಾಡಿಗೆ ಪಡೆದು ನೀಡಿದ್ದಾರೆ. ಈ ವ್ಯವಸ್ಥೆಯಿಂದ ರೈತರು ಮಳೆಯನ್ನು ಕಾಯುವ ಪ್ರಮೇಯ ತಪ್ಪಿದಂತಾಗಿದೆ. ಯಾವುದೇ ಬಂಡವಾಳವಿಲ್ಲದೆ ವಾರ್ಷಿಕವಾಗಿ ಹಣವನ್ನು ಪಡೆಯಲಾಗುವುದು. ತಾವು ಬೆಳೆದ ಬೆಳೆ ನಷ್ಟವಾಗುತ್ತದೆಯೋ ಅಥವಾ ಲಾಭ ತರುತ್ತದೆಯೋ ಎನ್ನುವ ಚಿಂತೆಯಿಲ್ಲ. ಏನೂ ಶ್ರಮ ಪಡದೆ ಹಣವನ್ನು ಪಡೆಯಲಾಗುತ್ತದೆ.

**ಗ್ರಾನೈಟ್ ಗಣಿಗಾರಿಕೆಯಿಂದ ಕೃಷಿ ಚಟುವಟಿಕೆ ಮೇಲಾಗಿರುವಂತ ಅನಪೇಕ್ಷಿತ ಪರಿಣಾಮಗಳು**

**ಬೆಳೆಗಳ ಮೇಲಿನ ದುಷ್ಪರಿಣಾಮಗಳು**

ಗಣಿಗಾರಿಕೆಯಿಂದಾಗುವ 'ಅನಾನುಕೂಲಗಳಲ್ಲಿ ಇದು ಮುಖ್ಯವಾದುದಾಗಿದೆ. ಗಣಿಗಾರಿಕೆಯ ಧೂಳು ಬೆಳೆಗಳ ಮೇಲೆ ಬಂದು ಕೂಡುವುದರಿಂದ ಅವುಗಳಲ್ಲಿ ದ್ಯುತಿಸಂಶ್ಲೇಷಣೆ ಕ್ರಿಯೆ ಸರಿಯಾಗಿ ನಡೆಯದಿರುವುದ್ದರಿಂದ ಬೆಳೆಗಳ ಬೆಳವಣಿಗೆ ಕುಂಠಿತವಾಗುತ್ತದೆ. ಮರಗಿಡಗಳು ಸಹ ಸರಿಯಾಗಿ ಕಾಯಿಯನ್ನು ಬಿಡದೆ ಪಸಲು ಕುಂಠಿತವಾಗುತ್ತದೆ. ದನಕರುಗಳು ತಿನ್ನುವ ಅಭಾವ ಬೆಳೆಯುವುದಿಲ್ಲ. ಸಸ್ಯಗಳು ಸರಿಯಾಗಿ ಬೆಳೆಯದಿರುವುದರಿಂದ ದನಕರುಗಳಿಗೆ ಮೇವಿನ ಕೊರತೆ ಉಂಟಾಗುತ್ತದೆ.

**ಇಳುವರಿ ಕಡಿಮೆಯಾಗುತ್ತದೆ**

ಗಣಿಗಾರಿಕೆಯ ಧೂಳಿನಿಂದ ಬೆಳೆಗಳು ಸರಿಯಾಗಿ ಬೆಳೆಯದಿದ್ದರೂ ಅಲ್ಪಸ್ವಲ್ಪ ಬೆಳೆಯನ್ನು ತೆಗೆದುಕೊಳ್ಳುತ್ತಾನೆ. ಗಣಿಗಾರಿಕೆಯ ಧೂಳಿನಿಂದ ಬೆಳೆಗಳು ಸರಿಯಾಗಿ ಬೆಳೆಯದೆ ಇಳುವರಿ ಕಡಿಮೆಯಾಗುತ್ತದೆ. ಆ ಫಸಲಿನ ಕಾಳು ಸಹ ಉತ್ತಮ ದರ್ಜೆಯ ಮೌಲ್ಯವನ್ನು ಕಳೆದುಕೊಳ್ಳುತ್ತದೆ.

**ಕೃಷಿಯ ಮೇಲೆ ನಿರಾಸಕ್ತಿ**

ಗಣಿಗಾರಿಕೆಯ ಧೂಳಿನಿಂದ ಬೆಳೆಗಳು ಸರಿಯಾಗಿ ಬೆಳೆಯುತ್ತಿಲ್ಲ. ಇಳುವರಿ ಕಡಿಮೆಯಾಗುತ್ತಿದೆ. ನಷ್ಟದ ಭಯ ಆವರಿಸಿ ರೈತನನ್ನು ತಲ್ಲಣಗೊಳಿಸಿದೆ. ತಾನು ಬೆಳೆದ ಬೆಳೆಯು ತನ್ನ ಕೈ ಸೇರುತ್ತದೆ ಎನ್ನುವ ನಂಬಿಕೆ ಇಲ್ಲದಂತಾಗಿದೆ. ಕೃಷಿಯ ಕೆಲಸಕ್ಕಾಗಿ ಕೂಲಿ ಆಳುಗಳ ಅಭಾವದಿಂದ ಕೃಷಿ ಚಟುವಟಿಕೆಗಳು ಸ್ಥಗಿತಗೊಳ್ಳುತ್ತಿವೆ. ಇಂತಹ ಹಲವಾರು ಕಾರಣಗಳಿಗಾಗಿ ಕೃಷಿಯ ಮೇಲೆ ನಿರಾಸಕ್ತಿ ಹುಟ್ಟುತ್ತಿದೆ.

**ಅಂತರ್ಜಲ ಕುಸಿತ**

ಗಣಿಗಾರಿಕೆಯಿಂದ ಅಂತರ್ಜಲ ಮಟ್ಟ ಹಂತ ಹಂತವಾಗಿ ಕುಸಿಯುತ್ತಿದೆ. ಗಣಿಗಾರಿಕೆಯ ಸ್ಫೋಟದಿಂದಾಗಿ ಭೂಮಿಯ ಶಿಲಾಪದರಗಳು ಸರಿಯುವುದ್ದರಿಂದ ಅಂತರ್ಜಲಮಟ್ಟ ಕುಸಿಯುತ್ತಿದೆ. ಹಿಂದೆ ಬೋರ್‌ವೆಲ್ ಹಾಕಿಸಿದರೆ 200–300 ಅಡಿಗೆ ನೀರು ಬರುತ್ತಿತ್ತು. ಆದರೆ ಇಂದಿನ ದಿನದಲ್ಲಿ 500 ಅಡಿ

ಬೋರ್‌ವೆಲ್ ಕೊರೆಸಿದರೂ ನೀರು ಬರದಂತಾಗಿದೆ. ಅಂತರ್ಜಲ ಮಟ್ಟ ಕುಸಿಯುತ್ತಿರುವುದರಿಂದ ಕೃಷಿಯು ಹಿಂದುಳಿಯುತ್ತಿದೆ.

**ಕೃಷಿ ಚಟುವಟಿಕೆಗಳ ಸ್ಥಗಿತತೆ**

ದುಡಿಯುವ ವರ್ಗಗಳು ಹೆಚ್ಚಿನ ಕೂಲಿ ದೊರೆಯುವಲ್ಲಿ ಕೆಲಸಕ್ಕೆ ಹೋಗುತ್ತಾರೆ. ಕೃಷಿ ಕ್ಷೇತ್ರದಲ್ಲಿ ದೊರೆಯುವ ಕೂಲಿಗಿಂತ ಗಣಿಗಾರಿಕೆಯ ಕೆಲಸದ ಕೂಲಿಯ ಪ್ರಮಾಣ ಮೂರನಾಲ್ಕು ಪಟ್ಟು ಹೆಚ್ಚಾಗಿದೆ. ಈ ರೀತಿಯ ಕೂಲಿಯಿಂದಾಗಿ ದುಡಿಯುವ ವರ್ಗಗಳನ್ನು ತನ್ನೆಡೆ ಸೆಳೆಯುತ್ತಿದೆ. ಈ ಕಾರಣದಿಂದಾಗಿ ಕೃಷಿ ಚಟುವಟಿಕೆಗಳ ಕುಂಠಿತಕ್ಕೆ ಕಾರಣವಾಗುತ್ತದೆ.

**ಕೃಷಿ ಭೂಮಿಯ ನಾಶ**

ಕರ್ನಾಟಕದಲ್ಲಿ ಕೃಷಿಯೋಗ್ಯವಾದ ಭೂಮಿ 123 ಲಕ್ಷ ಹೆಕ್ಟೇರ್ ಮಾತ್ರ. ಇಷ್ಟರಲ್ಲಿ ಸರಿಯಾದ ಪ್ರಮಾಣದ ಬೆಳೆಯನ್ನು ತೆಗೆಯಲು ಆಗುತ್ತಿಲ್ಲ. ಪರಿಸರ ಮಾಲಿನ್ಯ, ಜಲಮಾಲಿನ್ಯ, ಬರಗಾಲದಿಂದಾಗಿ ಭೂಮಿಯ ಸ್ವರೂಪ ಹಾಳಾಗುತ್ತಿದೆ. ಗಣಿಗಾರಿಕೆಯ ಧೂಳು ಹಾರಿ ಬಂದು ಜಮೀನಿನ ಮೇಲೆ ಬೀಳುವುದರಿಂದ ನೆಲದಲ್ಲಿ ಕಬ್ಬಿಣದ ಅಂಶ ಹೆಚ್ಚಾಗುತ್ತದೆ.ಇದರಿಂದ ಸರಿಯಾದ ಬೆಳೆಯನ್ನು ಬೆಳೆಯಲು ಆಗುವುದಿಲ್ಲ. ಭೂಮಿಯು ನೀರನ್ನು ಹೀರಿಕೊಳ್ಳುವ ಪ್ರಮಾಣ ಕಡಿಮೆಯಾಗುತ್ತದೆ. ಮಳೆಗಾಲದ ಸಮಯದಲ್ಲಿ ಗಣಿಗಾರಿಕೆಯ ಗುಡ್ಡಗಳಿಂದ ಹರಿದು ಬರುವ ನೀರು ಜಮೀನಿಗೆ ಸೇರುತ್ತದೆ. ಆ ಮಳೆಯ ನೀರು ಗ್ರಾನೈಟ್ ಧೂಳಿನ ಅಂಶವನ್ನು ಹೊತ್ತು ತರುವುದರಿಂದ ಭೂಮಿಯ ಸ್ವರೂಪದಲ್ಲಿ ಬದಲಾವಣೆಯಾಗಿ ಸಾವಯವತೆಯು ನಾಶವಾಗುತ್ತದೆ.

**ಅಲ್ಪ ಪ್ರಮಾಣದ ಪರಿಹಾರ**

ಗಣಿಗಾರಿಕೆಯ ಧೂಳು ಬಂದು ಬೆಳಗಳ ಮೇಲೆ ಕೂಡುವುದರಿಂದ ರೈತರಿಗೆ ನಷ್ಟವಾಗುತ್ತಿದೆ. ಈ ನಷ್ಟಕ್ಕಾಗಿ ರೈತರು ಗಣಿಗಾರಿಕೆಯ ವಿರುದ್ಧ ಪ್ರತಿಭಟಿಸಿದರೆ ಎಕರೆಗೆ 2000 ದಿಂದ 2500 ರೂ.ಗಳ ಪರಿಹಾರ ನೀಡುತ್ತಾರೆ. ಕೆಲವೊಂದು ಕಡೆ ಪ್ರತಿಭಟಿಸಿದರೂ ಯಾವುದೇ ಪ್ರಯೋಜನವಾಗಿಲ್ಲ.

**ಹೂಳಿನಿಂದ ಹಳ್ಳ ಮತ್ತು ಕೆರೆಗಳು ಮುಚ್ಚಿ ಹೋಗುತ್ತಿವೆ**

ಪ್ರಪಂಚದ ಯಾವುದೇ ಭಾಗವಾದರೂ ಖನಿಜ ಸಂಪತ್ತನ್ನು ಹೊಂದಿತ್ತೆಂದರೆ ಅಲ್ಲಿ ನೀರಿನ ಮೂಲ ಇದ್ದೇ ಇರುತ್ತದೆ. ಚಾಲುಕ್ಯರ ಸಾಮ್ರಾಜ್ಯ ಕಾಲದಲ್ಲಿ ಉತ್ತಮವಾದ ನೀರಾವರಿ ವ್ಯವಸ್ಥೆಯನ್ನು ಹೊಂದಿತ್ತು. ಆದರೆ ಇಂದು ಬಾಗಲಕೋಟ ಜಿಲ್ಲೆಯು ಅತಿ ಕಡಿಮೆ ಮಳೆ ಬೀಳುವ ಪ್ರದೇಶವೆಂದು ಗುರುತಿಸಲಾಗುತ್ತಿದೆ. ಮೊದಲು ನೀರಾವರಿ ಉನ್ನತ ಮಟ್ಟದಲ್ಲಿತ್ತೆಂದರೆ ಯಾವ ಪ್ರಮಾಣದಲ್ಲಿ ಮಳೆಯಾಗುತ್ತಿತ್ತೆಂದು ಕಲ್ಪನೆ ಮಾಡಿಕೊಳ್ಳಬಹುದು. ಆದರೆ ಇಂದು ಆಲಮಟ್ಟಿ ಜಲಾಶಯವನ್ನು ಹೊರತು ಪಡಿಸಿದರೆ ನೀರಾವರಿ ವ್ಯವಸ್ಥೆ ಇಲ್ಲವಾಗುವ ಸ್ಥಿತಿಗೆ ಬರುತ್ತದೆ. ಗಣಿಗಾರಿಕೆಯಿಂದಾಗಿ ಬೆಟ್ಟಗುಡ್ಡಗಳು ಬರಿದಾಗಿ ಮಳೆಯ ಪ್ರಮಾಣ ಕಡಿಮೆಯಾಗುತ್ತಿದೆ.

**ಪರಾಮರ್ಶನ ಗ್ರಂಥಗಳು**


- ಚವಡಿ ವಿ.ಸಿ. (1997). *ಪರಿಸರ ಪ್ರಜ್ಞೆ,* ಧಾರವಾಡ ಜಿಲ್ಲಾ ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿ, ಧಾರವಾಡ
- ಚಂದ್ರಪೂಜಾರಿ ಎಂ. (1998). *ಪರಿಸರ ಮತ್ತು ಅಭಿವೃದ್ಧಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕೃಷ್ಣಪ್ಪ ಶೆಟ್ಟಿ, ಪಿ. & ನಟರಾಜ್ ಡಿ.ಆರ್. (1997). *ಪರಿಸರ ಮುಂದೇನು.* ಪರಿಸರ ವಿಜ್ಞಾನ ಪರಿಷತ್ತು ಮತ್ತು ಜವಾಹರ್‌ಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್, ಬೆಂಗಳೂರು.
- ಒಡೆಯರ್ ಡಿ. ಹೆಗ್ಗಡೆ. (2003). ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮತ್ತು ಭಾರತ. ಗಜಾನನ ಪಬ್ಲಿಕೇಷನ್ಸ್, ಮೈಸೂರು.